WRI INDIA
—ROSS CENTER

**‘ಅನ್‌ಲಾಕ್ ಬೆಂಗಳೂರು’ (#UnlockBLR) ಸಮಾವೇಶದಲ್ಲಿ ನಗರದ ಸುಗಮ ಸಂಚಾರ, ನೀರು ಹಾಗೂ ವಿದ್ಯುತ್ ಅಗತ್ಯಗಳಿಗೆ ಸುಸ್ಥಿರ ಪರಿಹಾರಗಳನ್ನು ಕೋರಿದ ಭಾಗೀದಾರರು**

**ಬೆಂಗಳೂರು, 8ನೇ ಜುಲೈ 2017:** ಭಾರತದಲ್ಲಿರುವ ಮಹಾನಗರಗಳು ಇಂದು ತೀವ್ರ ನಗರೀಕರಣದ ಪರಿಣಾಮವನ್ನು ಎದುರಿಸುತ್ತಿವೆ. ಬೆಂಗಳೂರಿನಲ್ಲಿ ಕಳೆದ ಒಂದು ದಶಕದಲ್ಲಿ ಜನಸಂಖ್ಯೆ ದ್ವಿಗುಣಗೊಂಡಿದ್ದು, ವಸತಿ, ನೀರು, ಸ್ವಚ್ಛ ಗಾಳಿ, ಮೂಲಭೂತಸೌಕರ್ಯ ಹಾಗೂ ಸಾರಿಗೆ ಮುಂತಾದ ಸೌಲಭ್ಯಗಳ ಬೇಡಿಕೆಯೂ ತೀವ್ರವಾಗಿ ಹೆಚ್ಚಾಗಿದೆ. ನಗರದ ಸುಸ್ಥಿರ ಬೆಳವಣಿಗೆಯ ನಿಟ್ಟಿನಲ್ಲಿ ಕೂಡಲೇ ಸೂಕ್ತವಾದ ಪರಿಹಾರಗಳನ್ನು ಕೈಗೊಳ್ಳದಿದ್ದಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಬೆಂಗಳೂರಿನ ಸುಸ್ಥಿರ ಹಾಗೂ ಸಮಾನವಾದ ಅಭಿವೃದ್ಧಿಗೆ ಸಂಬಂಧಿಸಿದಂತೆ ‘ಅನ್‌ಲಾಕ್ ಬೆಂಗಳೂರು’ (#UnlockBLR) ಎಂಬ ಶೀರ್ಷಿಕೆಯಡಿ ಇತ್ತೀಚೆಗೆ ಬೆಂಗಳೂರಿನಲ್ಲಿ ವರ್ಲ್ಡ್ ರಿಸೋರ್ಸಸ್ ಇನ್ಸ್‌ಟಿಟ್ಯೂಟ್ (ಡಬ್ಲ್ಯೂಆರ್‌ಐ) ಇಂಡಿಯಾ ರಾಸ್ ಸೆಂಟರ್ ಆಯೋಜಿಸಿದ್ದ ಒಂದು ದಿನದ ಸಮಾವೇಶದಲ್ಲಿ ರಾಜ್ಯ ಹಾಗೂ ನಗರ ಪ್ರಾಧಿಕಾರಗಳು, ಅಧಿಕಾರಿಗಳು, ವಾಸ್ತುಶಿಲ್ಪಿಗಳು, ಚಿಂತಕರು, ವ್ಯಾಪಾರ ಸಂಸ್ಥೆಗಳ ಪ್ರತಿನಿಧಿಗಳು, ಪಟ್ಟಣ ಯೋಜಕರು ಹಾಗೂ ನಾಗರೀಕ ಸಮಾಜ ಸಂಸ್ಥೆಗಳ ಪ್ರತಿನಿಗಳು ಸೇರಿದಂತೆ ವಿವಿಧ ಭಾಗೀದಾರರು ಭಾಗವಹಿಸಿ, ನಗರದ ಮುಂದಿನ ದಾರಿಯ ಕುರಿತು ಚರ್ಚಿಸಿದರು.

ಶ್ರೀ ರಘುನಾಥ್ ದೇಶಪಾಂಡೆ, ಕೈಗಾರಿಕೆಗಳ ಸಚಿವರು, ಕರ್ನಾಟಕ ಸರ್ಕರ, ಪ್ರೊ. ಟಿ.ಜಿ. ಸೀತಾರಾಂ, ಕರ್ನಾಟಕ ರಾಜ್ಯ ಕೈಗಾರಿಕೆ ಹಾಗೂ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ (ಕೆಎಸ್ಎಸ್‌ಐಡಿಸಿ) ಹಾಗೂ ಹಿರಿಯ ಪ್ರಾಧ್ಯಾಪಕರು, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್, ಶ್ರೀ ಜಮ್‌ಶೆದ್ ಗೋದ್ರೆಜ್, ಅಧ್ಯಕ್ಷ, ಡಬ್ಲ್ಯೂಆರ್‌ಐ ಇಂಡಿಯಾ ಮತ್ತು ಡಾ. ಒ. ಪಿ. ಅಗರ್‌ವಾಲ್, ಸಿಇಒ, ಡಬ್ಲ್ಯೂಆರ್‌ಐ ಇಂಡಿಯಾ ಅವರು ಈ ಸಮಾವೇಶದಲ್ಲಿ ಭಾಗವಹಿಸಿ ಬೆಂಗಳೂರು ನಗರದ ಸುಸ್ಥಿರ ಅಭಿವೃದ್ಧಿಯ ಪ್ರಯತ್ನಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮಾತನಾಡಿದರು.

ಈ ಚರ್ಚೆಯು ನಗರದಲ್ಲಿ ವಾಯು ಮಾಲಿನ್ಯ, ಸಂಚಾರ ದಟ್ಟಣೆ, ಸೂಕ್ತ ನೈರ್ಮಲ್ಯ, ನೀರು ಹಾಗೂ ಇತರೆ ಸಂಪನ್ಮೂಲಗಳ ಕೊರತೆಗಳಿಂದ ಉಂಟಾಗುತ್ತಿರುವಂತಹ ಪರಿಸರ, ಆರೋಗ್ಯ ಹಾಗೂ ಸುರಕ್ಷತೆಯ ಸಮಸ್ಯೆಗಳ ಕಡೆ ಗಮನಕೇಂದ್ರೀಕರಿಸಿತು. ಬೆಂಗಳೂರಿನಲ್ಲಿ ಈಗ ‘ನಮ್ಮ ಮೆಟ್ರೊ’ ಕಾರ್ಯಾಚರಣೆ ಸಂಪೂರ್ಣವಾಗಿ ಆರಂಭವಾಗಿದ್ದು, ರಸ್ತೆ ಸಂಚಾರ ವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಸೂಕ್ತ ಯೋಜನೆ ರೂಪಿಸುವಿಕೆ ಹಾಗೂ ಉನ್ನತೀಕರಿಸಿದ, ತಂತ್ರಜ್ಞಾನ ಆಧಾರಿತ ಹೊಸ ಸಂಚಾರಿ ಯೋಜನೆಗಳ ಅಗತ್ಯಗಳ ಕುರಿತು ಚರ್ಚಿಸಿಲಾಯಿತು. ಟ್ರ್ಯಾನ್ಸಿಟ್-ಓರಿಯೆಂಟೆಡ್ ಡೆವಲೆಪ್‌ಮೆಂಟ್ (Transit-Oriented Development), ರಿಯಲ್ ಎಸ್ಟೇಟ್ (ನಿಯಂತ್ರಕ ಹಾಗೂ ಅಭಿವೃದ್ಧಿ) ಕಾಯ್ದೆ (RERA), ಇತ್ಯಾದಿಯಂತಹ ಸರ್ಕಾರದ ಹೊಸ ಹಾಗೂ ಪರಿಷ್ಕೃತ ಕಾರ್ಯನೀತಿಗಳ ಕುರಿತಂತೆ ಚರ್ಚೆಗಳನ್ನು ನಡೆಸಲಾಯಿತು ಹಾಗೂ ಯೋಜನೆ ರೂಪಿಸುವಿಕೆ ಸುಧಾರಣೆ, ಗೊಂದಲ ಕಡಿಮೆಗೊಳಿಸುವಿಕೆ ಹಾಗೂ ನಾಗರಿಕರ ಜೀವಿಸುವ ಗುಣಮಟ್ಟದ ಸುಧಾರಣೆಗಳಿಗಾಗಿ ಇವುಗಳನ್ನು ಯಾವ ರೀತಿ ಬಳಸಿಕೊಳ್ಳಬಹುದು ಅಥವಾ ಬದಲಾಯಿಸಬಹುದು ಎಂಬ ಕುರಿತು ವಿಮರ್ಶಿಸಲಾಯಿತು.

WRI INDIA
—ROSS CENTER

2007ರಲ್ಲಿ ಆಗಿನ ಕಾರ್ಯದರ್ಶಿಗಳಾದ ಶ್ರೀ ಬಿ.ಪಿ. ಮಹಿಷಿ ಅವರು, ಸಮಗ್ರ ಸಂಚಾರ ಹಾಗೂ ಸಾರಿಗೆ ಯೋಜನೆಯನ್ನು ವಿಮರ್ಶಿಸುವಂತೆ ಡಬ್ಲ್ಯೂಆರ್‌ಐ ಇಂಡಿಯಾದ (WRI India) EMBARQ ತಜ್ಞರನ್ನು ಆಹ್ವಾನಿಸಿದ್ದರು. ಆಗಿನಿಂದಲೂ ಡಬ್ಲ್ಯೂಆರ್‌ಐ ಇಂಡಿಯಾ ಬೆಂಗಳೂರಿನ ಈ ಸಮಸ್ಯೆಗಳ ಚರ್ಚೆಗಳಲ್ಲಿ ಭಾಗವಹಿಸುತ್ತಿದೆ. 2017ರಲ್ಲಿ ಡಬ್ಲ್ಯೂಆರ್‌ಐ ಇಂಡಿಯಾ ಭಾರತದಲ್ಲಿ ತನ್ನ 10ನೇ ವರ್ಷದ ಕಾರ್ಯಾಚರಣೆಯನ್ನು ಆಚರಿಸಿಕೊಳ್ಳುತ್ತಿದ್ದು, ಈ ಸಂದರ್ಭದಲ್ಲಿ ಬೆಂಗಳೂರನ್ನು ತನ್ನ ಮುಖ್ಯ ಗಮನಕೇಂದ್ರಿತ ನಗರವನ್ನಾಗಿರಿಸಿಕೊಂಡು, ಸುಸ್ಥಿರ ನಗರಾಭಿವೃದ್ಧಿ ಕ್ಷೇತ್ರದಲ್ಲಿ ಡಬ್ಲ್ಯೂಆರ್‌ಐ ಇಂಡಿಯಾದ ಕೆಲಸಗಳನ್ನು ಈ ಸಂದರ್ಭದಲ್ಲಿ ವಿವರಿಸಲಾಯಿತು. ಈ ಸಮಾವೇಶವು ಇವುಗಳಗೆ ಸಾಕ್ಷಿಯಾಯಿತು:

- ಬೆಂಗಳೂರಿನಲ್ಲಿ ಅತೀ ವೇಗದಲ್ಲಿ ಉಂಟಾಗುತ್ತಿರುವ ನಗರೀಕರಣದಿಂದಾಗಿ ನಗರ ಎದುರಿಸುತ್ತಿರುವ ಸವಾಲುಗಳು ಹಾಗೂ ನಗರದ ಸುಸ್ಥಿರ ಅಭಿವೃದ್ಧಿಯನ್ನು ಪರೋತ್ಸಾಹಿಸುವಂತಹ ದೃಷ್ಟಿಕೋನಗಳು ಹಾಗೂ ಅಭ್ಯಾಸಗಳ ವಿಷಯದ ಮೇಲೆ 'ಅನ್‌ಲಾಕಿಂಗ್ ಅರ್ಬನೈಜೇಶನ್' ('Unlocking Urbanization') ಎಂಬ ವಿಷಯ ಮಂಡನೆ.
- 'ಅನ್‌ಲಾಕ್ ಬೆಂಗಳೂರು' – ನಗರ ಯೋಜಕರು, ನಗರ ಚಿಂತಕರು ಹಾಗೂ ನಾಗರಿಕರಿಗೆ ಮೂಲಭೂತಸೌಕರ್ಯದ ಬಗ್ಗೆ ಮಾಹಿತಿಪೂರ್ವಕ ನಿರ್ಧಾರಗಳನ್ನು ಕೈಗೊಳ್ಳಲು ನೆರವಾಗುವಂತಹ ಸ್ಪೇಶಿಯಲ್ ಮ್ಯಾಪ್ಪಿಂಗ್, ಡಾಟಾ ಅನಾಲಟಿಕ್ಸ್, ಸಂಶೋಧನೆ ಹಾಗೂ ವಾಸ್ತವಿಕ ಸಾಕ್ಷಿಗಳಿರುವ ವಿಷಯ ಮಂಡನೆ

ಸ್ಟೇಷನ್ ಆ್ಯಕ್ಸೆಸ್ ಅಂಡ್ ಮೊಬಿಲಿಟಿ ಪ್ರೋಗ್ರಾಂ (STAMP) ಎಂಬ ವಿಷಯದ ಬಗ್ಗೆ ಅರ್ಧ ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರವು ಬೆಂಗಳೂರಿನ ಸಂಚಾರ ಸಮಸ್ಯೆಗಳಗೆ ಪರಿಹಾರಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನವೀನ ಉಪಾಯಗಳನ್ನು ಸೂಚಿಸಿತು.

ಬೆಂಗಳೂರಿನಲ್ಲಿ ಉತ್ತಮ ಸಂಚಾರ ವ್ಯವಸ್ಥೆಯ ಅಗತ್ಯದ ಬಗ್ಗೆ ಒತ್ತು ನೀಡಿ ಮಾತನಾಡಿದ ಪ್ರೊ. ಟಿ. ಜಿ. ಸೀತಾರಾಂ ಅವರು, "ಬೆಂಗಳೂರಿನಲ್ಲಿ ಇಂದು ರಸ್ತೆ ಸಂಪರ್ಕ ಅಭಿವೃದ್ಧಿ, ಅದರಲ್ಲಿಯೂ ವಿಶೇಷವಾಗಿ ಉಪ-ನಗರ ಪ್ರದೇಶಗಳಲ್ಲಿ ಇದು ಬಹಳ ಮುಖ್ಯ. ನಾವು ನಗರದ ಸಂಚಾರ ವ್ಯವಸ್ಥೆಯನ್ನು ಸುಧಾರಿಸುವ ನಿಟ್ಟಿನಲ್ಲಿ, ಬಹು-ಮಾದರಿ ಸಾರಿಗೆ ಪರಿಹಾರಗಳನ್ನು ಬಳಸಿಕೊಂಡು, ನವೀನ ಹಾಗೂ ದೀರ್ಘಾವಧಿ ಮಾದರಿಗಳ ಬಗ್ಗೆ ನಿರಂತರವಾಗಿ ಆಲೋಚಿಸುತ್ತಿರಬೇಕು," ಎಂದು ಅಭಿಪ್ರಾಯಪಟ್ಟರು.

ಸುಸ್ಥಿರ ಬೆಳವಣಿಗೆಯ ಅಗತ್ಯದ ಬಗ್ಗೆ ಮಾತನಾಡಿದ ಸೀತಾರಾಂ ಅವರು, "ಬೆಂಗಳೂರು ನಗರ ಗಾತ್ರ ಹಾಗೂ ಜನಸಾಂದ್ರತೆಯಲ್ಲಿ ಬೆಳೆದಿದೆ. ವಿದ್ಯುತ್ ಹಾಗೂ ನೀರಿನಂತಹ ನಗರ ಸಂಪನ್ಮೂಲಗಳ ಸುಸ್ಥಿರ ಹಾಗೂ ಸಮಾನವಾದ ಉಪಯೋಗಿಸುವ ವಿಧಾನಗಳ ಅಳವಡಿಕೆಯೊಂದೇ ದಾರಿ. ಈ ನಿಟ್ಟಿನಲ್ಲಿ ಡಬ್ಲ್ಯೂಆರ್‌ಐ ನಂತಹ ಸಂಸ್ಥೆಗಳೊಂದಿಗೆ ಸಹಾಯವನ್ನು ಪಡೆಯಲು ಬಹು-ಭಾಗೀದಾರರೊಂದಿಗೆ ನಿರಂತರವಾಗಿ ಮಾತುಕತೆಗಳನ್ನು ಹೊಂದುವುದು ಬಹಳ ಮುಖ್ಯ," ಎಂದು ವಿವರಿಸಿದರು.

ಸಂಚಾರ ದಟ್ಟಣೆ, ವಿಸ್ತಾರಗೊಳ್ಳುತ್ತಿರುವ ನಗರದ ವ್ಯಾಪ್ತಿ ಹಾಗೂ ಭೂಮಿಯ ಬಳಕೆ, ಮೂಲಭೂತಸೌಕರ್ಯ, ಸಾರಿಗೆ ಸಮಸ್ಯೆಗಳಿಗೆ ಪರಿಹಾರ ಹಾಗೂ ವಿದ್ಯುತ್‌ಗಳಂತಹ ವಿಷಯಗಳ ಮೇಲೆ ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ಸಾಮರ್ಥ್ಯ ಸುಧಾರಣೆ ವಿಷಯಗಳ ಬಗ್ಗೆ ಮಾತನಾಡಿದ ಡಬ್ಲ್ಯೂಆರ್‌ಐ ಇಂಡಿಯಾಗೆ ಹೊಸದಾಗಿ ನಿಯೋಜನೆಗೊಂಡಿರುವ ಸಿಇಒ ಡಾ. ಒ.ಪಿ. ಅಗರ್‌ವಾಲ್ ಅವರು, "ಬೆಂಗಳೂರು ಸೇರಿದಂತೆ ಭಾರತದ ಇತರೆ ಮೆಟ್ರೊಪಾಲಿಟನ್ ನಗರಗಳ ಸಮತೋಲಿತ, ಆರೋಗ್ಯಕರ ಹಾಗೂ ಸುಸ್ಥಿರ ಬೆಳವಣಿಗೆಯನ್ನು ಖಾತ್ರಿಪಡಿಸುವ ಅಗತ್ಯವಿದೆ. ಸರ್ಕಾರ, ಚಿಂತಕರು, ವ್ಯಾಪಾರಸ್ಥರು ಹಾಗೂ ನಾಗರಿಕ ಸಮಾಜದ ನಡುವೆ ಆಗಾಗ ಪರಸ್ಪರ ಚರ್ಚೆಗಳನ್ನು ಏರ್ಪಡಿಸುವುದರಿಂದ ಎಲ್ಲರಿಗೂ ಸಹಾಯವಾಗುತ್ತದೆ ಹಾಗೂ ಹೆಚ್ಚು ಯೋಜಿತ ನಗರಗಳನ್ನು ನಿರ್ಮಾಣ ಮಾಡುವಲ್ಲಿ ನೆರವಾಗುತ್ತದೆ," ಎಂದರು.

ಈ ಒಂದು-ದಿನದ ಸಮಾವೇಶದೊಂದಿಗೆ ಡಬ್ಲ್ಯೂಆರ್‌ಐ ಇಂಡಿಯಾ ರಾಸ್ ಸೆಂಟರ್, ಬೆಂಗಳೂರಿನಲ್ಲಿ ಸಾರ್ವಜನಿಕ ಸಾರಿಗೆ, ನಗರ ವಿಸ್ತರಣೆ, ಸ್ವಚ್ಛ ವಿದ್ಯುತ್ ಹಾಗೂ ನೀರು, ತಾಪಮಾನ ಬದಲಾವಣೆ ಹಾಗೂ ಹೊಸ ಸಂಚಾರ ವ್ಯವಸ್ಥೆಯಂತಹ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚು ಮಾತುಕತೆಗಳು, ಚರ್ಚೆಗಳಲ್ಲಿ ಭಾಗವಹಿಸಲಿದೆ.

ಹೆಚ್ಚಿನ ಮಾಹಿತಿಗಾಗಿ ದಯಮಾಡಿ ಸಂಪರ್ಕಿಸಿ: ನಿತ್ಯ ಕೌಶಿಕ್, ಸಂವಹನೆ, ಡಬ್ಲ್ಯೂಆರ್‌ಐ ಇಂಡಿಯಾ: 9819902763, nitya.kaushik@wri.org

**ಡಬ್ಲ್ಯೂಆರ್‌ಐ ಕುರಿತು**

ವರ್ಲ್ಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್ (ಡಬ್ಲ್ಯೂಆರ್‌ಐ), ಬ್ರಜಿಲ್, ಚೀನಾ, ಯೂರೋಪ್, ಭಾರತ, ಇಂಡೋನೇಷ್ಯ, ಮೆಕ್ಸಿಕೊ ಹಾಗೂ ಯುನೈಟೆಡ್ ಸ್ಟೇಟ್ಸ್‌ಗಳಲ್ಲಿ ಕಛೇರಿಗಳನ್ನು ಹೊಂದಿದ್ದು, 50ಕ್ಕೂ ಹೆಚ್ಚಿನ ಸಂಖ್ಯೆಯ ರಾಷ್ಟ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಜಾಗತಿಕ ಸಂಶೋಧನಾ ಸಂಸ್ಥೆಯಾಗಿದೆ. ನಮ್ಮ 450ಕ್ಕೂ ಹೆಚ್ಚಿನ ಸಂಖ್ಯೆಯ ತಜ್ಞರು ಹಾಗೂ ಸಿಬ್ಬಂದಿಗಳು, ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಲು, ದೊಡ್ಡ ವಿಚಾರಗಳನ್ನು ಕಾರ್ಯರೂಪಕ್ಕೆ ಪರಿವರ್ತಿಸಲು ನಾಯಕರೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಾರೆ.

ಡಬ್ಲ್ಯೂಆರ್‌ಐ ಇಂಡಿಯಾ ರಾಸ್ ಸೆಂಟರ್ ಸುಸ್ಥಿರ ನಗರಗಳಿಗಾಗಿ ಇರುವ ಡಬ್ಲ್ಯೂಆರ್‌ಐ ರಾಸ್ ಕೇಂದ್ರ. ಡಬ್ಲ್ಯೂಆರ್‌ಐ ರಾಸ್ ಸೆಂಟರ್, ನಗರ ಸುಸ್ಥಿರತೆಯನ್ನು ನಿಜವಾಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬ್ರೆಜಿಲ್, ಚೀನಾ, ಭಾರತ, ಮೆಕ್ಸಿಕೊ, ಟರ್ಕಿ ಹಾಗೂ ಯುನೈಟೆಡ್ ಸ್ಟೇಟ್ಸ್ ದೇಶಗಳಲ್ಲಿ ಡಬ್ಲ್ಯೂಆರ್‌ಐ ಕೈಗೊಂಡಿರುವಂತಹ ಜಾಗತಿಕ ಸಂಶೋಧನೆ ಹಾಗೂ ಕ್ಷೇತ್ರ ಅನುಭವಗಳು, ಲಕ್ಷಾಂತರ ಜನರ ಜೀವನ ಸುಧಾರಿಸುವ ನಿಟ್ಟಿನಲ್ಲಿ ಸಹಾಯವಾಗಿವೆ.

ನಗರ ಯೋಜನೆ ಹಾಗೂ ಸಂಚಾರ ಕ್ಷೇತ್ರಗಳಲ್ಲಿ ದೀರ್ಘಾವಧಿ ಜಾಗತಿಕ ಹಾಗೂ ಸ್ಥಳೀಯ ಅನುಭವವನ್ನು ಆಧರಿಸಿ ಡಬ್ಲ್ಯೂಆರ್‌ಐ ಇಂಡಿಯಾ ರಾಸ್ ಸೆಂಟರ್, ವಿದ್ಯುತ್ ಸಾಮರ್ಥ್ಯ ಅಭಿವೃದ್ಧಿ ಹಾಗೂ ಉತ್ಪಾದನೆ, ನೀರು ನಿರ್ವಹಣೆ, ಪರಿಣಾಮಕಾರಿ ಆಡಳಿತವನ್ನು ಉತ್ತೇಜಿಸಲು ನಿರೂಪಿತ ಪರಿಹಾರಗಳನ್ನು ಹಾಗೂ ಕಾರ್ಯಾಧಾರಿತ ಸಾಧನಗಳನ್ನು ಬಳಸುತ್ತದೆ ಹಾಗೂ ಅತಿ ವೇಗವಾಗಿ ಬೆಳೆಯುತ್ತಿರುವ ನಗರ ಪರಿಸರವನ್ನು ಹೊಸ ಸವಾಲುಗಳನ್ನು ಸಮರ್ಥವಾಗಿ ಎದುರಿಸುವಂತೆ ಸಮರ್ಥಗೊಳಿಸುತ್ತದೆ. ತನ್ನ ವಿಶೇಷ ಸಂಶೋಧನೆ ಹಾಗೂ ಸಾಧನಗಳ ಮೂಲಕ 200 ನಗರಗಳ ಮೇಲೆ ಪ್ರಭಾವ ಬೀರಲು ಗುರಿ ಹೊಂದಿರುವ ಡಬ್ಲ್ಯೂಆರ್‌ಐ ಇಂಡಿಯಾ ರಾಸ್ ಸೆಂಟರ್, ನಾಲ್ಕು ಮಹಾನಗರಗಳು ಹಾಗೂ ಎರಡು ಖಂಡಗಳಲ್ಲಿ ಆಳವಾದ ಪರಿಣಾಮಕಾರಿ ದೃಷ್ಟಿಕೋನ ಆಧಾರಿತ ಕಾರ್ಯದಲ್ಲಿ ಮಗ್ನವಾಗಿದೆ ಹಾಗೂ 30 ಕ್ಕೂ ಹೆಚ್ಚಿನ ನಗರ ಪ್ರದೇಶಗಳಲ್ಲಿ ಗುರಿಕೇಂದ್ರಿತ ಸಹಾಯವನ್ನು ಒದಗಿಸುತ್ತಿದೆ. ಈ ಮೂಲಕ ವಿಶ್ವದಾದ್ಯಂತ ನಗರಗಳಲ್ಲಿ ವಾಸಿಸುತ್ತಿರುವ ಜನರಿಗೆ ಆರ್ಥಿಕ, ಪರಿಸರ ಹಾಗೂ ಸಾಮಾಜಿಕ ಲಾಭಗಳನ್ನು ಒದಗಿಸಿಕೊಡುತ್ತಿದೆ. | www.wricitiesindia.org